
ಮತ್ತು ನಾಡಿನ ನಡುವಿನ ಕೊಂಡಿಯಂತೆ ಕನ್ನಮರಿ ಕಾಣಿಸುತ್ತಾನೆ. ಕಾಡಿನಿಂದ ನಾಡಿಗೆ ಬಂದ ಹುಡುಗ ಎಂದೂ ನಾಡಿನ ಪ್ರಭಾವಕ್ಕೆ ಒಳಗಾಗದೆ, ತನ್ನತನವನ್ನು ಸದಾ ಹಸಿರಾಗಿಸಿಕೊಂಡಿರುವುದು ಗಮನಾರ್ಹ.

ಹನೂರರ ಕಾದಂಬರಿಯು ಸಮಾಜದಿಂದ ಅನುಮಾನಕ್ಕೆ ಒಳಗಾಗಿದ್ದ ಹಾಗೂ ತಿರಸ್ಕೃತಗೊಂಡಿದ್ದ ಒಂದು ಸಮುದಾಯ ಈ ಲೋಕದೆದುರು ಬೆತ್ತಲೆಗೊಳ್ಳುವ ಬದುಕಿನ ಅನಾವರಣವನ್ನು ತೆರೆದಿಡುತ್ತದೆ. ಕನ್ನಮರಿ ಪರಂಪರೆಯ ಕುಲ ಕಸುಬು 'ಕನ್ನ' ಹಾಕುವುದು, ಅಂದರೆ ಕದಿಯುವುದು. ಒಂದು ಕಡೆ ನೆಲೆನಿಲ್ಲದ ಸಮುದಾಯವಿದು. ಒಂದು ಕಡೆ ನೆಲೆನಿಲ್ಲುವುದು, ಸಮಾಜದ ಇತರ ಜನರು ಮಾಡುವ ವೃತ್ತಿಗಳನ್ನು ಮಾಡುವುದು, ಹಣ ಸಂಗ್ರಹಿಸುವುದು, ಅಕ್ಷರ ಕಲಿಯುವುದು, ಇವೆಲ್ಲವೂ ತಮ್ಮ ಪೂರ್ವಜರಿಗೆ ಮಾಡುವ ದ್ರೋಹ ಎನ್ನುವುದು ಕನ್ನಮರಿ ಸಮುದಾಯದ ನಂಬಿಕೆ. ಈ ನಂಬಿಕೆ, ದುರ್ಬಲ ಸಮುದಾಯಗಳ ಜನರನ್ನು ನಾಗರಿಕ ಸಮಾಜ ದಿಕ್ಕು ತಪ್ಪಿಸಿದ್ದಕ್ಕೆ ಉದಾಹರಣೆಯಂತಿದೆ.

ಕನ್ನಮರಿಯ ತಾಯಿಗೆ ತನ್ನ ಮಗ ಕಲಿತು ವಿದ್ಯಾವಂತನಾಗಲಿ ಎನ್ನುವ ಆಸೆ. ಆದರೆ, ಕನ್ನಮರಿಯ ತಾಯಿಯ ನಿರ್ಧಾರವನ್ನು ಸುತ್ತಮುತ್ತಲಿನವರೇ ತಿರಸ್ಕರಿಸುತ್ತಾರೆ. 'ಇದು ನಿಮಗೆ ಸರಿಯಲ್ಲ. ಕುಲಕ್ಕೆ ಎದುರಾಗಿ ನಡೆದರೆ ಮುಂದೊಂದು ದಿನ ಕಂಟಕ ಎದುರಿಸಬೇಕಾಗುತ್ತದೆ'ಎಂದುಭೀತಿಹುಟ್ಟಿಸಲಾಗುತ್ತದೆ. ಈ ಪ್ರತಿರೋಧದ ನಡುವೆಯೂ ಕನ್ನಮರಿಯ ತಾಯಿ ತನ್ನ ಮಗನನ್ನು ಓದಲು ಶಾಲೆಗೆ ಹಾಕಿದ್ದು ಹಾಗೂ ಆ ಮಗ ಓದಲು ಕಲಿತದ್ದು, ಮುಂದೆ ಅವನ ಬದುಕೇ ಒಂದು ಚರಿತ್ರೆಯಾಗಿದ್ದು ಜನರಿಗೆ ಸ್ಫೂರ್ತಿ ಮತ್ತು ಮಾದರಿಯಾಗಿದೆ. ಈ ಚಲನೆ ಒಂದು ರೀತಿಯಲ್ಲಿ ಜನರ ಕಣ್ಣು ತೆರೆಸುವ ಮಾರ್ಗ ಎಂದರೆ ತಪ್ಪಾಗಲಾರದು.

ಸಾಮಾಜಿಕ ಸಂರಚನೆಯಲ್ಲಿ ಯಾವ ಅಂಜಿಕೆ, ನಾಚಿಕೆಯೂ ಇಲ್ಲದೆ ಹಗಲುದರೋಡೆ ಮಾಡುತ್ತ, ಮಾನವಂತರ ಸೋಗು ಹಾಕಿಕೊಂಡು ಬದುಕುತ್ತಿರುವ ಜನರಿಗೆ ಈ ಕಾದಂಬರಿ ಕನ್ನಡಿ ಹಿಡಿದಿದೆ. ಅಪ್ರಮಾಣಿಕತೆ ಮತ್ತು ಚೋರತನ ಹೊಸ ವಿನ್ಯಾಸ ಪಡೆದುಕೊಂಡಿರುವ ಸಮಕಾಲೀನ ಸಂದರ್ಭದಲ್ಲಿ, ಪ್ರಾಮಾಣಿಕತೆಯ ಸೋಗಿನ ಮುಖವಾಡಗಳನ್ನು ಕಾದಂಬರಿ ಕಳಚುತ್ತದೆ.




**ಕನ್ನಮರಿ**
ಲೇ: ಕೃಷ್ಣಮೂರ್ತಿ ಹನೂರು
ಪು: 212; ಬೆ: 230
ಪ್ರ: ಅಂಕಿತ ಪುಸ್ತಕ, ಬೆಂಗಳೂರು.
ಫೋನ್: 9019190502.

ಕನ್ನಮರಿಯ ಬಾಲ್ಯ ಮತ್ತು ಬದುಕು ಕಾಡಿನೊಂದಿಗೆ ಬೆಸೆದುಕೊಂಡಿದೆ. ಕನ್ನಮರಿಗೆ ಅನಿರೀಕ್ಷಿತವಾಗಿ ದೊರೆಯುವ ಮಾದೇವಸ್ವಾಮಿ ಅಂತಹ ಮೇಷ್ಟ್ರ ಸನಿಹ ಮತ್ತು ಪ್ರೀತಿಯಿಂದಾಗಿ ಅವನ ಬದುಕೇ ಬದಲಾಗುವುದನ್ನು ಕಾಣಬಹುದು. ಮನುಷ್ಯನಾಗುವುದೆಂದರೆ ಅಷ್ಟು ಸುಲಭದ ಮಾತಲ್ಲ. ಆದರೆ ಇಲ್ಲಿಯ ನಿರೂಪಕ, ಮಾದೇವಸ್ವಾಮಿ ಮತ್ತು ಗುರುನಾಥ ಉಪಾಧ್ಯಾಯ ಮೇಷ್ಟ್ರ ಪಾತ್ರಗಳು ಮಾನವೀಯ ನೆಲೆಯ, ತಾಯಿ ಪ್ರೀತಿ ಔದಾರ್ಯವನ್ನು ಮೆರೆದಿರುವುದು ಕನ್ನಮರಿಯಂತಹ ಸಮುದಾಯಗಳಿಂದ ಬರುವ ಮಕ್ಕಳಿಗೆ ದಾರಿದೀಪವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಈ ಎರಡು ಪಾತ್ರಗಳನ್ನು ಸಾಮಾಜಿಕ ನ್ಯಾಯದ ಪರಿಕಲ್ಪನೆ ಮತ್ತು ಮಾನವೀಯ ಗುಣಕ್ಕೆ ರೂಪಕಗಳಾಗಿ ಕಾದಂಬರಿಕಾರರು ಸೃಷ್ಟಿಸಿದಂತಿದೆ. ಮಾದೇವಸ್ವಾಮಿ ಅವರು ಕನ್ನಮರಿಯ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೆಂದು ಅವನ್ನು ತಮ್ಮ ಮನೆಗೆ ಕರೆತಂದು ಓದಿಗೆ ಅನುಕೂಲ ಕಲ್ಪಿಸುತ್ತಾರೆ.